ಉದಯವಾಣಿ
ಕನ್ನಡ ದಿನಪತ್ರಿಕೆ

# ಇಂದಿನಿಂದ ವಿಚಾರ ಸಂಕಿರಣ

**ಬೆಂಗಳೂರು:** ಸ್ವಾಮಿ ವಿವೇಕಾನಂದರ 150ನೇ ಜನ್ಮಜಯಂತಿ ಅಂಗವಾಗಿ ನಾಗರಿಕತೆಯ ಭವಿಷ್ಯ ವಿಷಯ ಕುರಿತು ನಗರದಲ್ಲಿ ಮೂರು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದೆ. ಜೈನ್ ವಿಶ್ವವಿದ್ಯಾಲಯ,ಮಿಥಿಕ್ ಸೊಸೈಟಿ ಹಾಗೂ ರಷ್ಯಾದ ಇಂಟರ್ ನ್ಯಾಷನಲ್ ಸೆಂಟರ್ ಫಾರ್ ಸ್ಟಡಿ ಆಫ್ ದಿ ಫ್ಯೂಚರ್‌ನ ಸಹಯೋಗದಲ್ಲಿ ನಗರದಲ್ಲಿ ಡಿ.22 ರಿಂದ ಜೆ.ಪಿ. ನಗರದ ಸಿಎಂಎಸ್ ಶಾಲಾ ಆವರಣದಲ್ಲಿ ವಿಚಾರ ಸಂಕಿರಣ ನಡೆಯಲಿದೆ ಎಂದು ಕಾರ್ಯಕ್ರಮದ ವಕ್ತಾರ ಸಂದೀಪ್ ಶಾಸ್ತ್ರಿ ಹೇಳಿದ್ದಾರೆ. ಮೂರು ದಿನಗಳ ಕಾರ್ಯಕ್ರಮದಲ್ಲಿ ದೇಶ- ವಿದೇಶದ ಹಲವು ವಿದ್ವಾಂಸರು 12 ವಿವಿಧ ಅಧಿವೇಶನಗಳಲ್ಲಿ ಪಾಲ್ಗೊಳ್ಳಲಿದ್ದು, ಪರಿಸರ, ಇಂಧನ , ಆರೋಗ್ಯ, ಪೌಷ್ಟಿಕ ಆಹಾರ ಮತ್ತು ಜನಸಂಖ್ಯಾ ಸ್ಫೋಟಕ್ಕೆ ಸಂಬಂಧಿಸಿದಂತೆ ವಿಚಾರ ಮಂಡಿಸಲಿದ್ದಾರೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಸ್ಕೋದ ವಿಶ್ವಶಾಸ್ತ್ರ ವಿಜ್ಞಾನಿ ಪ್ರೊ.ವ್ಲಾಡಿಮಿರ್ ಬುರ್ಡಯೂಜ್, ಮಿಥಿಕ್ ಸೊಸೈಟಿಯ ನಾಗರಾಜ ಮತ್ತಿತರರು ಉಪಸ್ಥಿತರಿದ್ದರು.